ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1180
2)	ಸದಸ್ಯರ ಹೆಸರು	ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)
3)	ಉತ್ತರಿಸಬೇಕಾದ ದಿನಾಂಕ	22-09-2021
4)	ಉತ್ತರಿಸಬೇಕಾದ ಸಚಿವರು	ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿನ ಜಲಾಶಯ ಹಾಗೂ ಕೆರೆಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸಲು ಯಾವ ಯೋಜನೆಗಳನ್ನು ರೂಪಿಸಲಾಗಿದೆ;	ಬೀದರ್ ಜಿಲ್ಲೆಯಲ್ಲಿನ ಜಲಾಶಯ ಹಾಗೂ ಕೆರೆಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸಲು ರೂಪಿಸಲಾದ ಯೋಜನೆಗಳ ವಿವರಗಳನ್ನು **<u>ಅನುಬಂಧ-1</u>** ರಲ್ಲಿ ನೀಡಲಾಗಿದೆ.
ಆ)	ಈ ಯೋಜನೆಗೆ ಉಪಯೋಗ ಪಡೆಯಲು ಯಾವ ಮಾನದಂಡಗಳನ್ನು ರೂಪಿಸಲಾಗಿದೆ; (ಮಾಹಿತಿ ಒದಗಿಸುವುದು)	ಸದರಿ ಯೋಜನೆಗಳ ಉಪಯೋಗವನ್ನು ಪಡೆಯಲು ಇರುವ ಮಾನದಂಡಗಳನ್ನು **<u>ಅನುಬಂಧ-2</u>** ರಲ್ಲಿ ನೀಡಲಾಗಿದೆ.
ಇ)	2018-19 ರಿಂದ ಇಲ್ಲಿಯವರೆಗೂ ಜಿಲ್ಲೆಯ ಜಲಾಶಯ ಹಾಗೂ ಕೆರೆಗಳಲ್ಲಿ ವಿವಿಧ ಯೋಜನೆಗಳಿಗೆ ಇಲಾಖೆಯಿಂದ ಎಷ್ಟು ಮೀನುಮರಿಗಳನ್ನು ಯಾವ ಮೂಲಗಳಿಂದ ಬಿಡಲಾಗಿದೆ;	2018-19 ರಿಂದ ಇಲ್ಲಿಯವರೆಗೂ ಜಿಲ್ಲೆಯ ಜಲಾಶಯ ಹಾಗೂ ಕೆರೆಗಳಲ್ಲಿ ವಿವಿಧ ಯೋಜನೆಗಳಲ್ಲಿ ಇಲಾಖೆಯಿಂದ ಬಿತ್ತನೆ ಮಾಡಿರುವ ಮೀನುಮರಿಗಳ ವಿವರವನ್ನು **<u>ಅನುಬಂಧ-3</u>** ರಲ್ಲಿ ನೀಡಲಾಗಿದೆ.
ಈ)	ಜಲಾಶಯ ಮತ್ತು ಕೆರೆಗಳಿಗೆ ಬಿಡಲು ಅವಶ್ಯವಿರುವಷ್ಟು ಮೀನುಮರಿಗಳ ಪ್ರಮಾಣ ಜಿಲ್ಲೆಯಲ್ಲಿ ಲಭ್ಯವಿದೆಯೇ; ಕಳೆದ 5 ವರ್ಷಗಳಿಂದ ಯಾರಿಂದ ಖರೀದಿಸಲಾಗಿದೆ; (ಮಾಹಿತಿ ಒದಗಿಸುವುದು)	ಜಲಾಶಯ ಮತ್ತು ಕೆರೆಗಳಿಗೆ ಬಿಡಲು ಅವಶ್ಯವಿರುವಷ್ಟು ಮೀನುಮರಿಗಳ ಪ್ರಮಾಣ ಜಿಲ್ಲೆಯಲ್ಲಿ ಲಭ್ಯವಿರುವುದಿಲ್ಲ. ಕೆರೆ/ಜಲಾಶಯಗಳನ್ನು ಗುತ್ತಿಗೆ ಮತ್ತು ಟೆಂಡರ್-ಕಂ-ಹರಾಜು ಮೂಲಕ ಪಡೆದ ಗುತ್ತಿಗೆದಾರರು ಸರ್ಕಾರಿ ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳಿಂದ ಹಾಗೂ ನೊಂದಾಯಿತ ಮೀನುಮರಿ ಪಾಲನಾ ಕೇಂದ್ರಗಳಿಂದ ಖರೀದಿಸಿ ದಾಸ್ತಾನು ಮಾಡುತ್ತಾರೆ. ವಿವಿಧ ಯೋಜನೆಗಳಲ್ಲಿ ಇಲಾಖೆಯಿಂದ ಖರೀದಿಸಿ ಬಿತ್ತನೆ ಮಾಡಿರುವ ಮೀನುಮರಿಗಳ ವಿವರವನ್ನು **<u>ಅನುಬಂಧ-4</u>** ರಲ್ಲಿ ನೀಡಲಾಗಿದೆ.

ಉ)	ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಮೀನುಮರಿ ಉತ್ಪಾದನಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆಯೇ; ಇದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; (ಮಾಹಿತಿ ನೀಡುವುದು)	ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಊ)	ಪ್ರತಿವರ್ಷ ಯಾವ ಆಧಾರದ ಮೇಲೆ ತಾಂತ್ರಿಕವಾಗಿ ಜಲಾಶಯ ಮತ್ತು ಕೆರೆಗಳಿಗೆ ಮೀನುಮರಿ ಬಿಡಲಾಗುತ್ತಿದೆ ಹಾಗೂ ಬೀದರ್ ಜಿಲ್ಲೆಗೆ ಮೀನು ಉತ್ಪಾದನೆಗೆ ಸರ್ಕಾರದಿಂದ ನೀಡಲಾದ ಅನುದಾನ ಎಷ್ಟು? (ಐದು ವರ್ಷಗಳ ಮಾಹಿತಿ ನೀಡುವುದು)	ಜಲಸಂಪನ್ಮೂಲಗಳ ಒಟ್ಟು ಜಲವಿಸ್ತೀರ್ಣದ ಶೇ.50% ರಷ್ಟನ್ನು ಪರಿಗಣಿಸಿ ಪ್ರತಿ ಹೇಕ್ಟರ್ ಜಲ ವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಬಿಡಲಾಗುತ್ತದೆ. ಬೀದರ ಜಿಲ್ಲೆಗೆ ಮೀನು ಉತ್ಪಾದನೆಗೆ ಸರ್ಕಾರದಿಂದ ಕಳೆದ 05 ವರ್ಷಗಳಲ್ಲಿ ನೀಡಿರುವ ಅನುದಾನದ ವಿವರ ಕೆಳಕಂಡಂತೆ ಇರುತ್ತದೆ. 2016-17 -----ರೂ.3.525 ಲಕ್ಷ 2017-18 -----ರೂ.0.99 ಲಕ್ಷ 2018-19 ----- ರೂ.2.00 ಲಕ್ಷ 2019-20 ----- ರೂ.13.20 ಲಕ್ಷ 2020-21 ----- ರೂ.4.49 ಲಕ್ಷ

ಸಂಖ್ಯೆ: ಪಸಂಮೀ ಇ-263 ಮೀಇಯೋ 2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

[illegible] 1180 ರ

ಅನುಬಂಧ-01

ಕೆರೆ ಮತ್ತು ಜಲಾಶಯಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸಲು ರೂಪಿಸಿರುವ ಯೋಜನೆಗಳ ವಿವರ

1.ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ

1. "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು. ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲಾಗುವುದು.

2. "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆ : ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಕೆರೆಗಳಿಗೆ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ.

3. ಜಲಾಶಯ/ಕೆರೆಗಳ ಅಂಚಿನಲ್ಲಿ ನಿರ್ಮಿಸಿದ ಕೊಳಗಳಲ್ಲಿ ಮೀನುಮರಿಗಳನ್ನು ಪಾಲನೆ ಮಾಡಲು ಒಂದು ಹೆಕ್ಟೇರ್ ಗೆ ಗರಿಷ್ಠ ರೂ 2.50 ಲಕ್ಷ ಸಹಾಯಧನ ನೀಡಲಾಗುವುದು.

4. <u>ಮೀನುಮರಿ ಖರೀದಿಗೆ ಸಹಾಯಧನ</u>:ಸರ್ಕಾರ ಸ್ವಾಮ್ಯದ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಮತ್ತು ನೋಂದಾಯಿತ ಮೀನುಮರಿ ಪಾಲನೆದಾರರಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/- ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

2. ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ

ರಾಜ್ಯದ ಆಯ್ದ ಜಲಾಶಯಗಳಲ್ಲಿ ಬೆರಳುದ್ದದ ಮೀನು ಮರಿ ಬಿತ್ತನೆ ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬೆರಳುದ್ದದ ಮೀನುಮರಿಗಳನ್ನು ನೋಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುವುದು.

[illegible]

ಅನುಬಂಧ-2

ಯೋಜನೆಯ ಉಪಯೋಗ ಪಡೆಯಲು ಇರುವ ಮಾನದಂಡಗಳು

1.ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ ಯೋಜನೆ

- ಮೀನುಗಾರಿಕೆ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿರಬೇಕು.
- ಸದರಿ ಸಂಘಗಳು ಕೆರೆಗಳನ್ನು ಗುತ್ತಿಗೆಗೆ ಪಡೆದಿರಬೇಕು

2. ಮೀನುಮರಿ ಖರೀದಿಗೆ ಸಹಾಯಧನ

- ಮೀನುಗಾರಿಕೆ ಇಲಾಖೆಯಿಂದ ಜಲಸಂಪನ್ಮೂಲಗಳನ್ನು ಗುತ್ತಿಗೆ / ಟೆಂಡರ್ ಕಂ ಹರಾಜು ಮೂಲಕ ಪಡೆದಿರಬೇಕು
- ಸರ್ಕಾರಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೆಂದ್ರಗಳಿಂದ ಅಥವಾ ನೊಂದಾಯಿತ ಮೀನುಮರಿ ಪಾಲನೆದಾರರಿಂದ ಮೀನುಮರಿ ಖರಿದಿಸಿದ ಬಿಲ್ಲುಗಳನ್ನು ಸಲ್ಲಿಸಬೇಕು.

3. ಮತ್ಸ್ಯ ಕೃಷಿ ಆಶಾ ಕಿರಣ ಯೋಜನೆ

- ಮೀನುಗಾರಿಕೆ ಇಲಾಖೆಯಿಂದ ಜಲಸಂಪನ್ಮೂಲಗಳನ್ನು ಗುತ್ತಿಗೆ / ಟೆಂಡರ್ ಕಂ ಹರಾಜು ಮೂಲಕ ಪಡೆದಿರಬೇಕು
- ಕೆರೆಗಳಲ್ಲಿ ಕನಿಷ್ಠ 6 ರಿಂದ 9 ತಿಂಗಳು ನೀರು ನಿಲ್ಲುವಂತಿರಬೇಕು
- ಕೆರೆಗಳ ಉಪಯುಕ್ತತಾ ಜಲವಿಸ್ತೀರ್ಣ 50 ಹೆಕ್ಟೇರ್ ಗಿಂತ ಕಡಿಮೆ ಇರಬೇಕು.
- ಬಲಿತ ಬಿತ್ತನೆ ಮರಿಗಳು ಮತ್ತು ಮೀನು ಆಹಾರ ಖರೀದಿಸಬೇಕು

4.ಜಲಾಶಯ/ಕೆರೆಗಳ ಅಂಚಿನಲ್ಲಿ ನಿರ್ಮಿಸಿದ ಕೊಳಗಳಲ್ಲಿ ಮೀನುಮರಿ ಪಾಲನೆಗೆ ಸಹಾಯ

- ಮೀನುಗಾರಿಕೆ ಇಲಾಖೆಯಿಂದ ಜಲಸಂಪನ್ಮೂಲಗಳನ್ನು ಗುತ್ತಿಗೆ / ಟೆಂಡರ್ ಕಂ ಹರಾಜು ಮೂಲಕ ಪಡೆದ ಗುತ್ತಿಗೆದಾರರು ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.
- ಕೆರೆಗಳ ಅಂಚಿನಲ್ಲಿ ಕೊಳಗಳನ್ನು ನಿರ್ಮಿಸಿ ಮೀನುಮರಿಗಳನ್ನು ಪಾಲನೆ ಮಾಡಲು ಗರಿಷ್ಠ ಒಂದು ಹೆಕ್ಟೇರ್ ವಿಸ್ತೀರ್ಣದವರೆಗೆ ಮತ್ತು ಜಲಾಶಯಗಳ ಅಂಚಿನಲ್ಲಿ ಕೊಳಗಳನ್ನು ನಿರ್ಮಿಸಿ ಮೀನುಮರಿಗಳನ್ನು ಪಾಲನೆ ಮಾಡಲು ಗರಿಷ್ಠ ಎರಡು ಹೆಕ್ಟೇರ್ ವಿಸ್ತೀರ್ಣದವರೆಗೆ ಸಹಾಯಧನ ಪಡೆಯಲು ಅವಕಾಶವಿರುತ್ತದೆ.

5.ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ

- ಮೀನುಗಾರಿಕೆ ಇಲಾಖೆಯಿಂದ ಪರವಾನಿಗೆ ಮೂಲಕ ವಿಲೇವಾರಿಯಾದ ಜಲಾಶಯಗಳಿಗೆ ಬಲಿತ ಮೀನುಮರಿಗಳನ್ನು ನೊಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಿ ಬಿತ್ತನೆ ಮಾಡಲಾಗುವುದು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ರಘುನಾಥ್ ರಾವ್ ಮಲ್ಕಾಪುರೆ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1180 ರ

ಅನುಬಂಧ-3

2018-19 ರಿಂದ ಇಲ್ಲಿಯವರೆಗೆ ಕೆರೆ /ಜಲಾಶಯಗಳಿಗೆ ದಾಸ್ತಾನು ಮಾಡಲು ಖರೀದಿಸಿದ ಮೀನುಮರಿಗಳ ವಿವರ					
2018-19		2019-20		2020-21	
ಮೀನುಮರಿಗಳ ಸಂಖ್ಯೆ	ಮೀನುಮರಿ ಸರಬರಾಜುದಾರರ ವಿವರ	ಮೀನುಮರಿಗಳ ಸಂಖ್ಯೆ	ಮೀನುಮರಿ ಸರಬರಾಜುದಾರರ ವಿವರ	ಮೀನುಮರಿಗಳ ಸಂಖ್ಯೆ	ಮೀನುಮರಿ ಸರಬರಾಜುದಾರರ ವಿವರ
2.00 ಲಕ್ಷ	01ಶ್ರೀ ಪಿ.ಶಶಿದೇವಿ ತಾ/ ಹೋಸಪೇಟೆ ಜಿ/ಬಳ್ಳಾರಿ.	15.50 ಲಕ್ಷ	01. ಶಿವಲೀಲಾ ಶಿವರಾಜ ಹೇರೂರ (ಕೆ) ತಾ/ಕಾಳಗಿ ಜಿ/ಕಲಬುರ್ಗಿ	4.58 ಲಕ್ಷ	1. ಪ್ರಿಯಂಕಾ ಬಿರಾದಾರ ಮೀನು ಮರಿ ಪಾಲನಾ ಕೇಂದ್ರ,ಕಾಳಗಿ,ಹೇರೂರ,ಕಲಬುರ್ಗಿ ತಾ:
	02 ವಿಕ್ರಮ್ ರೆಡ್ಡಿ ತಾ/ ಹೋಸಪೇಟ ಜಿ/ಬಳ್ಳಾರಿ.		02. ಲಕ್ಷ್ಮೀಬಾಯಿ ಗುರುಶಾಂತಪ್ಪಾ ಹೇರೂರ (ಕೆ) ತಾ/ಕಾಳಗಿ ಜಿ/ಕಲಬುರ್ಗಿ		
			03. ವಿಜಯಶ್ರೀ ಮಂಜುನಾಥ ಹೇರೂರ (ಕೆ) ತಾ/ಕಾಳಗಿ ಜಿ/ಕಲಬುರ್ಗಿ		
			04. ರಾಜೇಶ್ವರಿ ಗಂ ಬಸವರಾಜ ಹೆರೂರ ತಾ|| ಕಾಳಗಿ ಜಿ/ಕಲಬುರ್ಗಿ		
			05. ಇಂದುಕಲಾ ಗಂ ಶಿವಪುತ್ರಪ್ಪ ಹೆರೂg ತಾ|| ಕಾಳಗಿ ಜಿ/ಕಲಬುರ್ಗಿ		
			06. ಶ್ರೀ ಸತ್ಯಸಾಯಿ ಮೀನುಮರಿ ಪಾಲನಾ ಕೆಂದ್ರ,		

[illegible]

ಅನುಬಂಧ-4

ಕಳೆದ 5 ವರ್ಷಗಳಲ್ಲಿ ಕೆರೆ /ಜಲಾಶಯಗಳಿಗೆ ದಾಸ್ತಾನು ಮಾಡಲು ಖರೀದಿಸಿದ ಮೀನುಮರಿಗಳ ವಿವರ	
2016-17	1.ಎಮ್/ಎಸ್ ಪಿ.ರಘು ಒಬಳರಡ್ಡಿ ತಾ/ಹೊಸಪೇಟ ಜಿ/ಬಳ್ಳಾರಿ 2 .ಅಮಾಲಾವತಿ ತಾ/ ಹೊಸಪೇಟ ಜಿ/ಬಳ್ಳಾರಿ. 3 .ಕಿರಣ ಕುಮಾರ ತಾ/ ಹೊಸಪೇಟ ಜಿ/ಬಳ್ಳಾರಿ. 4.ವೀರರಾಘವ ರಡ್ಡಿ ಬಿನ್ ಸಥೀ ಗಂಗಾರಾಜು ತಾ/ ಹೊಸಪೇಟ ಜಿ/ಬಳ್ಳಾರಿ. 5.ಪಿ.ಶಶಿದೇವಿ ಮತ್ತು ವಿಕ್ರಮ ರೆಡ್ಡಿ ತಾ/ ಹೊಸಪೇಟ ಜಿ/ಬಳ್ಳಾರಿ.
2017-18	01.ಎಮ್/ಎಸ್ ಪಿ.ರಘು ಒಬಳರಡ್ಡಿ ತಾ/ ಹೊಸಪೇಟ ಜಿ.ಬಳ್ಳಾರಿ.
2018-19	01ಶ್ರೀ ಪಿ.ಶಶಿವೆದಿ ತಾ/ ಹೊಸಪೇಟ ಜಿ/ಬಳ್ಳಾರಿ. 02 ವಿಕ್ರಮ್ ರೆಡ್ಡಿ ತಾ/ ಹೊಸಪೇಟ ಜಿ/ಬಳ್ಳಾರಿ.
2019-20	1. ಶಿವಲೀಲಾ ಶಿವರಾಜ ಹೇರೂರ (ಕೆ) ತಾ/ಕಾಳಗಿ ಜಿ/ಕಲಬುರ್ಗಿ 02. ಲಕ್ಷೀಬಾಯಿ ಗುರುಶಾಂತಪ್ಪಾ ಹೇರೂರ (ಕೆ) ತಾ/ಕಾಳಗಿ ಜಿ/ಕಲಬುರ್ಗಿ 03. ವಿಜಯಶ್ರೀ ಮಂಜುನಾಥ ಹೇರೂರ (ಕೆ) ತಾ/ಕಾಳಗಿ ಜಿ/ಕಲಬುರ್ಗಿ 04. ರಾಜೇಶ್ವರಿ ಗಂ ಬಸವರಾಜ ಹೆರೂರ ತಾ|| ಕಾಳಗಿ ಜಿ/ಕಲಬುರ್ಗಿ 05. ಇಂದುಕಲಾ ಗಂ ಶಿವಪುತ್ರಪ್ಪ ಹೆರೂಽ ತಾ|| ಕಾಳಗಿ ಜಿ/ಕಲಬುರ್ಗಿ 06. ಶ್ರೀ ಸತ್ಯಸಾಯಿ ಮೀನುಮರಿ ಪಾಲನಾ ಕೆಂದ್ರ,ಸಿಂಧನೂರು
2020-21	01. ಶಿವಲೀಲಾ ಶಿವರಾಜ ಹೇರೂರ (ಕೆ) ತಾ/ಕಾಳಗಿ ಜಿ/ಕಲಬುರ್ಗಿ 02. ಲಕ್ಷೀಬಾಯಿ ಗುರುಶಾಂತಪ್ಪಾ ಹೇರೂರ (ಕೆ) ತಾ/ಕಾಳಗಿ ಜಿ/ಕಲಬುರ್ಗಿ 03. ವಿಜಯಶ್ರೀ ಮಂಜುನಾಥ ಹೇರೂರ (ಕೆ) ತಾ/ಕಾಳಗಿ ಜಿ/ಕಲಬುರ್ಗಿ 04. ರಾಜೇಶ್ವರಿ ಗಂ ಬಸವರಾಜ ಹೆರೂರ ತಾ|| ಕಾಳಗಿ ಜಿ/ಕಲಬುರ್ಗಿ 05. ಇಂದುಕಲಾ ಗಂ ಶಿವಪುತ್ರಪ್ಪ ಹೆರೂರ ತಾ|| ಕಾಳಗಿ ಜಿ/ಕಲಬುರ್ಗಿ 06. ಶ್ರೀ ಸತ್ಯಸಾಯಿ ಮೀನುಮರಿ ಪಾಲನಾ ಕೆಂದ್ರ,ಸಿಂಧನೂರು